"ಮಧುರ ಮಕ್ಕಳೇ - ನೀವು ತಮ್ಮ ಅದೃಷ್ಟವನ್ನು ವಜ್ರ ಸಮಾನ ಮಾಡಿಕೊಳ್ಳಬೇಕು, ಪುರುಷಾರ್ಥ ಮಾಡಿ ತಂದೆಯಿಂದ ಸ್ವರ್ಗದ ಪೂರ್ಣ ಆಸ್ತಿಯನ್ನು ತೆಗೆದುಕೊಳ್ಳಬೇಕು"

ಪ್ರಶ್ನೆ: ಬುದ್ಧಿಯಲ್ಲಿ ಯಾವ ರಹಸ್ಯ ಯುಕ್ತಿಯುಕ್ತವಾಗಿ ತಿಳಿದುಕೊಂಡಾಗ ಅಪಾರವಾದ ಖುಷಿ ಇರುತ್ತದೆ?

ಉತ್ತರ: ನಾಟಕದ ರಹಸ್ಯ. ಈ ನಾಟಕದಲ್ಲಿ ಪ್ರತಿಯೊಬ್ಬ ಪಾತ್ರಧಾರಿಗೂ ಅವಿನಾಶಿ ಪಾತ್ರ ಸಿಕ್ಕಿದೆ, ಆ ಪಾತ್ರವನ್ನು ಪ್ರತಿಯೊಬ್ಬರೂ ಅಭಿನಯಿಸಲೇಬೇಕು. ಯಾರ ಪಾತ್ರವೂ ಸಹ ಎಂದಿಗೂ ಅಳಿಸುವುದಾಗಲಿ ಅಥವಾ ಸವೆಯುವುದಾಗಲಿ ಆಗುವುದಿಲ್ಲ. ಇದು ಮಾಡಿ ಮಾಡಲ್ಪಟ್ಟ ನಾಟಕವಾಗಿದೆ..... ಈ ನಾಟಕದಲ್ಲಿ ಸ್ವಲ್ಪವೂ ಹೆಚ್ಚು-ಕಡಿಮೆ ಆಗುವುದಿಲ್ಲ. ಒಂದು ಕಲ್ಪ ಮುಗಿದ ನಂತರ ಮತ್ತೆ ಅದೇ ಪಾತ್ರ ಪ್ರತಿ ಸೆಕೆಂಡ್ ಪುನರಾವರ್ತನೆ ಆಗುತ್ತದೆ. ಇದು ಬಹಳ ಗುಹ್ಯ ರಹಸ್ಯವಾಗಿದೆ, ಇದನ್ನು ಯುಕ್ತಿ-ಯುಕ್ತವಾದ ಬುದ್ಧಿಯಿಂದ ತಿಳಿದುಕೊಂಡಾಗ ಖುಷಿಯಿರುತ್ತದೆ. ಇಲ್ಲವಾದರೆ ಗೊಂದಲವಾಗುತ್ತಾರೆ. ಮಕ್ಕಳೇ ಗೊಂದಲವಾಗಬೇಡಿ, ನಿಶ್ಚಯವಿಟ್ಟು ಸಂಪೂರ್ಣ ಆಸ್ತಿ ತೆಗೆದುಕೊಳ್ಳುವಂತಹ ಪುರುಷಾರ್ಥ ಮಾಡಿ ಎಂದು ತಂದೆ ಹೇಳುತ್ತಾರೆ.

ಗೀತೆ: ನಿಮ್ಮನ್ನು ಪಡೆದು ನಾವು ಜಗತ್ತನ್ನೇ ಪಡೆದೆವು...........

ಓಂ ಶಾಂತಿ. ಮಧುರಾತಿ ಮಧುರ ಈಶ್ವರೀಯ ಮಕ್ಕಳು ಗೀತೆಯನ್ನು ಕೇಳಿದಿರಿ. ನಾಟಕದನುಸಾರ ನೀವು ಈಗ ಈಶ್ವರನ ಮಕ್ಕಳಾಗಿದ್ದೀರೆಂಬ ತಿಳುವಳಿಕೆಯಿದೆ. ಈಶ್ವರನಿಂದ ನೀವು ಸ್ವರ್ಗದ ಮಾಲೀಕರಾಗಲು ಅಥವಾ ಸ್ವರಾಜ್ಯವನ್ನು ತೆಗೆದುಕೊಳ್ಳಲು ಬಂದಿದ್ದೀರಿ. ಸ್ವರ್ಗ ಏನೆಂಬುದನ್ನು ನರಕದ ಮನುಷ್ಯರು ಯಾರೂ ಸಹ ತಿಳಿದುಕೊಂಡಿಲ್ಲ! ತಂದೆಯು ಸ್ವರ್ಗದ ಸ್ಥಾಪನೆ ಮಾಡುತ್ತಾರೆ, ಮತ್ತೆ ರಾವಣ ನರಕದ ಸ್ಥಾಪನೆ ಮಾಡುತ್ತಾನೆಂದು ನೀವು ತಿಳಿದುಕೊಂಡಿದ್ದೀರಿ, ಇದನ್ನೂ ಸಹ ಯಾರೂ ತಿಳಿದುಕೊಂಡಿಲ್ಲ. ನಾವು ತಂದೆಯಿಂದ ಸ್ವರ್ಗದ ರಾಜ್ಯವನ್ನು ತೆಗೆದುಕೊಳ್ಳುತ್ತಿದ್ದೇವೆಂದು ನೀವು ತಿಳಿದುಕೊಂಡಿದ್ದೀರಿ. ಯಾವಾಗ ಮನುಷ್ಯರು ಸಾಯುತ್ತಾರೆ, ಆಗ ಸತ್ತವರನ್ನು ಸ್ವರ್ಗಕ್ಕೆ ಹೋಗುವವರೆಂದು ಹೇಳುವರು. ಆಗ ಸ್ವಯಂನ್ನು ನರಕದಲ್ಲಿದ್ದೇವೆಂದು ಹೇಳಿದಂತೆ ಆಗುತ್ತದೆ, ಹಾಗೂ ಎಲ್ಲರೂ ನರಕದ ಮಾಲೀಕರಾಗಿದ್ದಾರೆ. ಇದು ಬಹಳ ಸಹಜ ಮಾತಾಗಿದೆ, ಆದುದರಿಂದ ಗೊಂದಲವಾಗುವ ಆವಶ್ಯಕತೆಯಿಲ್ಲ. ನಿಮ್ಮ ಅದೃಷ್ಟ ಈಗ ವಜ್ರ ಸಮಾನ ಆಗುತ್ತದೆ. ವಜ್ರ ಸಮಾನ ಅದೃಷ್ಟವನ್ನು ತಂದೆಯ ವಿನಃ ಬೇರೆ ಯಾರೂ ಮಾಡುವುದಿಲ್ಲ. ತಂದೆಯಿಂದ ನಾವು ಸ್ವರ್ಗದ ಆಸ್ತಿಯನ್ನು ತೆಗೆದುಕೊಳ್ಳುತ್ತಿದ್ದೇವೆಂದು ನಿಮಗೆ ಗೊತ್ತಿದೆ. ನರಕವು ಎಷ್ಟು ಸಮಯದವರೆಗೆ ಇರುತ್ತದೆ ಎಂದು ತಿಳಿಸಿಕೊಟ್ಟರೆ, ಅವರು ಸತ್ಯಯುಗವು ಲಕ್ಷಾಂತರ ವರ್ಷಗಳಿರುತ್ತದೆ ಎಂದು ಹೇಳುತ್ತಾರೆ. ನೀವೀಗ ಈಶ್ವರೀಯ ವಿದ್ಯಾರ್ಥಿಗಳಾಗಿದ್ದೀರಿ, ಪರಮಪಿತ ಪರಮಾತ್ಮನ ಮೂಲಕ ನೀವು ಸ್ವರ್ಗದ ಆಸ್ತಿಯನ್ನು ತೆಗೆದುಕೊಳ್ಳುತ್ತಿದ್ದೀರಿ ಆದರೆ ಇಂತಹ ತಂದೆಯನ್ನು ಹೇಗೆ ಮರೆಯುತ್ತೀರೆಂದು ತಂದೆಗೂ ಸಹ ತಿಳಿಯುವುದಿಲ್ಲ. ಬಿರುಗಾಳಿಯಂತೂ ಬಹಳ ಬರುತ್ತದೆ ಏಕೆಂದರೆ ಶ್ರಮವಿಲ್ಲದೆ ಸ್ವರ್ಗದ ಮಾಲೀಕರಾಗಲು ಸಾಧ್ಯವಿಲ್ಲ. ಯಾರಾದರು ಸತ್ತಾಗ ಸ್ವರ್ಗವಾಸಿಗಳಾದರೆ ಮತ್ತೇಕೆ ಅಳಬೇಕು? ನೀವು ಖುಷಿಯಿಂದ ಚಪ್ಪಾಳೆ ತಟ್ಟಬೇಕಲ್ಲವೇ! ಒಂದುವೇಳೆ ಸ್ವರ್ಗಕ್ಕೆ ಹೋಗುವುದು ಇಷ್ಟು ಸಹಜವಾಗಿದ್ದರೆ ಎಲ್ಲರಿಗೂ ಮೃತ್ಯುವಿನ ಮಾತ್ರೆಯನ್ನು ಕೊಟ್ಟು ಸ್ವರ್ಗಕ್ಕೆ ಕಳುಹಿಸಬಹುದಲ್ಲವೇ! ಆಗ ಇಲ್ಲಿ ದುಃಖಿಗಳಾಗಿರುವಂತಹ ಅವಶ್ಯಕತೆ ಏನಿದೆ. ದುಃಖದಲ್ಲಿ ಮನುಷ್ಯರು ವಿಷವನ್ನು ಕುಡಿದು ಸಾಯುತ್ತಾರೆ. ಹಾಗೆಯೇ ಎಷ್ಟೊಂದು ಸೈನಿಕರೂ ಸಹ ಸಾಯುವವರು, ಅಲ್ಲದೆ ಪರಸ್ಪರ ಒಬ್ಬರನ್ನೊಬ್ಬರು ಕೊಲ್ಲುತ್ತಾರೆ. ತಂದೆ ಹೇಳುತ್ತಾರೆ - ಯಾವಾಗ ಸತ್ತ ನಂತರ ಸ್ವರ್ಗಕ್ಕೆ ಹೋಗುವುದಾದರೆ ನೀವು ಏಕೆ ಅಳುತ್ತೀರಿ? ಎಂದು ಎಲ್ಲರಿಗೂ ತಿಳಿಸಬೇಕು. ವಾಸ್ತವಿಕವಾಗಿ ಈ ರೀತಿ ಸಾವನ್ನಪ್ಪಿ ಯಾರೂ ಸಹ ಸ್ವರ್ಗದಲ್ಲಾಗಲಿ, ನಿರ್ವಾಣಧಾಮಕ್ಕಾಗಲಿ ಹೋಗಲು ಸಾಧ್ಯವಿಲ್ಲ. ತಂದೆಯು ಈಗ ನಿಮಗೆ ಸ್ವರ್ಗದಲ್ಲಿ ಹೋಗುವಂತಹ ಉಪಾಯವನ್ನು ತಿಳಿಸುತ್ತಾರೆ. ಯಾವಾಗ ಸ್ವರ್ಗದ ರಚಯಿತ ಸ್ವರ್ಗವನ್ನು ರಚಿಸಿದಾಗ ಯಾರಾದರೂ ಸ್ವರ್ಗದಲ್ಲಿ ಹೋಗಬಹುದಲ್ಲವೇ! ಈಗ ಸ್ವರ್ಗ ರಚನೆ ಮಾಡುವ ಸಲುವಾಗಿ ಸ್ವರ್ಗದ ರಚಯಿತ ತಂದೆ ಬಂದಿದ್ದಾರೆ. ರಾವಣ ರಾಜ್ಯ ಪ್ರಾರಂಭವಾದ ಮೇಲೆ ದೇವೀ-ದೇವತೆಗಳು ವಾಮಮಾರ್ಗದಲ್ಲಿ ಹೋಗುತ್ತಾರೆಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ವಾಮಮಾರ್ಗದಲ್ಲಿ ಹೋದ ಸಮಯದಿಂದ ಈ ವಿಕಾರವೂ ಆರಂಭವಾಗುತ್ತದೆ. ಈ ರೀತಿ ರಾವಣ ರಾಜ್ಯ ಎಂದಿನಿಂದ ಆರಂಭವಾಗುತ್ತದೆ ಎಂದು ನಿಗದಿ ಇಲ್ಲ. ಅದೇರೀತಿ ತಂದೆಯೂ ಬ್ರಹ್ಮಾ ತಂದೆಯವರಲ್ಲಿ ಯಾವಾಗ ಪ್ರವೇಶ ಮಾಡಿದರೆಂದು ನೀವು ಮಕ್ಕಳು ಹೇಳಲು ಸಾಧ್ಯವಿಲ್ಲ. ಬ್ರಹ್ಮಾ ತಂದೆಗೆ ಸಾಕ್ಷಾತ್ಕಾರವಾದ ದಿನದೊಂದು ಪ್ರವೇಶವಾಗಿರಬೇಕು ಅಥವಾ ಬೇರೆ ಯಾವಾಗ ಪ್ರವೇಶವಾಗಿರಬೇಕು? ಸಾಕ್ಷಾತ್ಕಾರವಂತು ಭಕ್ತಿಮಾರ್ಗದಲ್ಲಿಯೂ ಸಹ ಆಗುತ್ತದೆ. ತಂದೆ ಯಾವ ಸಮಯದಲ್ಲಿ ಪ್ರವೇಶ ಮಾಡಿದರೆಂದು ಗೊತ್ತಾಗುವುದಿಲ್ಲ. ಈ ರೀತಿ ಕೃಷ್ಣನ ಆಗಮನದ ಸಮಯವನ್ನು ತೋರಿಸುತ್ತಾರೆ, ಆದರೆ ಶಿವ ತಂದೆಯ ಆಗಮನದ ಸಮಯ ಮೊದಲಾದವುಗಳನ್ನು ಹೇಳುವುದಿಲ್ಲ. ಏಕೆಂದರೆ ತಂದೆ ಮಾಲೀಕರಾಗಿರುವ ಕಾರಣ ಯಾವಾಗ ಬಂದು

ಹೋಗುತ್ತಾರೆಂದು ತಿಳಿಯುವುದಿಲ್ಲ. ತಂದೆಯ ಮುರಳಿಯಿಂದ ನೀವಿಲ್ಲಿ ತಿಳಿದುಕೊಳ್ಳುತ್ತೀರಿ.

ನಾನು ಕಾಲರ ಕಾಲನಾಗಿ ಎಲ್ಲರನ್ನು ಮನೆಗೆ ಹಿಂತಿರುಗಿ ಕರೆದುಕೊಂಡು ಹೋಗಿದ್ದೇನೆಂದು ತಂದೆಯು ತಿಳಿಸುತ್ತಾರೆ. ಸತ್ಯಯುಗದಲ್ಲಿ ಬಹಳ ಕಡಿಮೆ ಜನಸಂಖ್ಯೆ ಇರುತ್ತದೆ ಆದರೆ ಕಲಿಯುಗದಲ್ಲಿ ಎಷ್ಟೊಂದು ಮನುಷ್ಯರಿದ್ದಾರೆ. ಈಗ ಎಲ್ಲಾ ಆತ್ಮಗಳು ಮನೆಗೆ ಹಿಂತಿರುಗಬೇಕಾಗಿದೆ. ಮನೆಗೆ ಕರೆದುಕೊಂಡು ಹೋಗಲು ಮಾರ್ಗದರ್ಶನವೂ ಸಹ ಬೇಕಾಗುತ್ತದೆ ಆದುದರಿಂದ ನಾನು ಆತ್ಮಿಕ ಮಾರ್ಗದರ್ಶಕನಾಗಿ ಬಂದು ನಿಮ್ಮೆಲ್ಲರನ್ನು ಕರೆದುಕೊಂಡು ಹೋಗುತ್ತೇನೆ. ಈ ರೀತಿ ಹೊಸ ಪ್ರಪಂಚದ ಸಲುವಾಗಿ ನಿಮಗೆ ಓದಿಸುತ್ತಿದ್ದೇನೆ. ಸ್ವರ್ಗ ಹಾಗೂ ನರಕ ಏನಾಗಿದೆ, ಎಷ್ಟು ಸಮಯದವರೆಗೆ ನಡೆಯುತ್ತದೆ, ಎಂದಿನಿಂದ ಪ್ರಾರಂಭವಾಯಿತು ಎಂಬುದನ್ನು ಯಾವುದೇ ಸನ್ಯಾಸಿ ಮೊದಲಾದವರು ತಿಳಿದುಕೊಂಡಿಲ್ಲ. ರಚಯಿತ ಒಬ್ಬರೇ ಆಗಿದ್ದಾರೆ ಹಾಗೂ ಸೃಷ್ಟಿಯೂ ಸಹ ಒಂದೇ ಆಗಿದೆ, ಆದರೆ ಶಾಸ್ತ್ರಗಳಲ್ಲಿ ಆತಾಳ-ಪಾತಾಳ ಎಂದು ಅನೇಕ ಸೃಷ್ಟಿಗಳನ್ನು ಮಾಡಿ, ಅವುಗಳನ್ನು ಹುಡುಕುತ್ತಿದ್ದಾರೆ. ಒಂದೊಂದು ನಕ್ಷತ್ರದಲ್ಲಿ ಒಂದೊಂದು ಪ್ರಪಂಚವಿದೆ ಎಂದು ತಿಳಿದುಕೊಳ್ಳುತ್ತಾರೆ. ನಾನು ಪುನಃ ನಿಮಗೆ ಗೀತಾ ಜ್ಞಾನವನ್ನು ಹೇಳುತ್ತೇನೆಂದು ತಂದೆ ಹೇಳುತ್ತಾರೆ. ಈ ನಾಟಕವು ಒಂದೇ ಆಗಿದ್ದು ಕ್ರೈಸ್ತ ಪುನಃ ತನ್ನ ಸಮಯದಲ್ಲಿ ಬರಬೇಕಾಗುತ್ತದೆ. ಸತ್ಯಯುಗದಲ್ಲಿ ದೇವೀ-ದೇವತೆಗಳ ರಾಜ್ಯ ವಿನಃ ಬೇರೆ ಯಾರೂ ಇರುವುದಿಲ್ಲ. ಈಗ ನೀವು ತಂದೆಯಿಂದ ಅಂತಹ ಆಸ್ತಿಯನ್ನು ತೆಗೆದುಕೊಳ್ಳುವ ಸಲುವಾಗಿ ಬಂದಿದ್ದೇವೆಂದು ತಿಳಿದುಕೊಂಡಿದ್ದೀರಿ. ಹೇ! ಪತಿತ ಪಾವನ ಬಾ ಎಂದು ನೆನಪು ಮಾಡುವುದಾದರೆ ಅಗತ್ಯವಾಗಿ ಸಂಗಮದಲ್ಲಿಯೇ ಬರಬೇಕಾಗುತ್ತದೆ. ನಾವೀಗ ಇಲ್ಲಿಗೆ ಏಕೆ ಬಂದಿದ್ದೇವೆಂದು ನೀವು ತಿಳಿದುಕೊಂಡಿದ್ದೀರಿ. ಏನು ಪಡೆದುಕೊಳ್ಳಲು ಬಂದಿರುವಿರಿ? ನಾವು ತಂದೆಯಿಂದ ಸ್ವರ್ಗದ ಆಸ್ತಿಯನ್ನು ಪಡೆಯಲು ಬಂದಿದ್ದೇವೆಂದು ನೀವು ಹೇಳುತ್ತೀರಿ. ನಾವೀಗ ರಾಜಯೋಗವನ್ನು ಕಲಿಯುತ್ತಿದ್ದೇವೆ ಹಾಗೂ ಕಲ್ಪ-ಕಲ್ಪ ಆಸ್ತಿಯನ್ನು ತೆಗೆದುಕೊಳ್ಳುತ್ತಾ ಪುನಃ ಕಳೆದುಕೊಳ್ಳುತ್ತೇವೆ. ಈಗ ಮತ್ತೆ ಪುರುಷಾರ್ಥ ಮಾಡಬೇಕು. ಪೂರ್ಣ ಜ್ಞಾನವನ್ನು ಪಡೆದು ಬೇರೆಯವರಿಗೂ ಕೊಡಬೇಕು, ಇಲ್ಲವಾದರೆ ಹೇಗೆ ವೃದ್ಧಿಯಾಗುತ್ತದೆ? ಗೀತೆ ಎಷ್ಟೊಂದು ಉತ್ತಮವಾಗಿದೆ. ಇದರ ಅರ್ಥವನ್ನು ನೀವು ಮಾತ್ರ ತಿಳಿದುಕೊಂಡಿದ್ದೀರಿ. ಈ ಗೀತೆ ಎಷ್ಟು ಮಧುರವಾಗಿದ್ದು ನಿಮ್ಮ ಮನಸ್ಸಿಗೆ ನಾಟುತ್ತದೆ. ಓ ತಂದೆ ನಾವು ನಿಮ್ಮಿಂದ ಯಾರೂ ಕಸಿದುಕೊಳ್ಳದಂತಹ ಆಸ್ತಿಯನ್ನು ತೆಗೆದುಕೊಳ್ಳುತ್ತಿದ್ದೇವೆ. ಇದು ಅವಿನಾಶಿ ಆಸ್ತಿ, ಅವಿನಾಶಿ ತಂದೆಯಿಂದ ಸಿಗುತ್ತದೆ. ಅನಾದಿ ಸೃಷ್ಟಿ ನಾಟಕದನುಸಾರ ಅಥವಾ ಗೀತೆಯ ವಾಗ್ದಾನದಂತೆ ಪುನಃ ತಂದೆಯೂ ಗೀತೆಯನ್ನು ಉಚ್ಚರಿಸುವ ಸಲುವಾಗಿ ಬಂದಿದ್ದಾರೆ. ಆ ಗೀತೆಯಲ್ಲಿ ರಾಜಯೋಗವನ್ನೂ ಸಹ ಕಲಿಸಿದ್ದರು ಆದರೆ ಇದನ್ನು ಶಾಸ್ತ್ರಗಳಲ್ಲಿ ಏರುಪೇರು ಮಾಡಿದ್ದಾರೆ, ಆದುದರಿಂದ ಉಪಾಯದಿಂದ ತಿಳಿಸಿಕೊಡುವಂತಹವರೂ ಸಹ ಬೇಕಾಗುತ್ತದೆ. ಕೆಲವರು ಜ್ಯೋತಿ ಜ್ಯೋತಿಯಲ್ಲಿ ಲೀನವಾಯಿತು ಎಂದು ಹೇಳುತ್ತಾರೆ ಆದರೆ ಆತ್ಮ ಅವಿನಾಶಿಯಾಗಿದ್ದು ಆತ್ಮನ ಪಾತ್ರವೂ ಸಹ ಅವಿನಾಶಿಯಾಗಿ ಮಾಡಬೇಕು........ ಆತ್ಮನ ಪಾತ್ರವೂ ಎಂದಿಗೂ ಅಳಿಸುವುದಿಲ್ಲ ಹಾಗೂ ಸವೆಯುವುದೂ ಇಲ್ಲ. ಇದು ಮಾಡಿ ಮಾಡಲ್ಪಟ್ಟ ನಾಟಕವಾಗಿದೆ. ಈ ನಾಟಕದಲ್ಲಿ ಎಂದಿಗೂ ಪರಿವರ್ತನೆ (ಅದಲು ಬದಲು) ಆಗುವುದಿಲ್ಲ. ಈ ರೀತಿ ನಾಟಕವು ಬಹಳ ವಿಚಿತ್ರವಾಗಿದೆ. ಇಷ್ಟು ಸೂಕ್ಷ್ಮ ಆತ್ಮನಲ್ಲಿ ಅವಿನಾಶಿ ಪಾತ್ರ ತುಂಬಲ್ಪಟ್ಟಿದೆ. ಕಲ್ಪದ ನಂತರ ಪುನಃ ಅದೇ ಪಾತ್ರ ಪುನರಾವರ್ತನೆ ಮಾಡುತ್ತದೆ. ಈ ರೀತಿ ಒಂದು ಸೆಕೆಂಡಿನ ನಂತರ ಕಲ್ಪದ ಹಿಂದಿನಂತೆ ಪುನರಾವರ್ತನೆ ಆಗುತ್ತದೆ. ನಾಟಕವನ್ನೂ ಸಹ ಯುಕ್ತಿಯುಕ್ತವಾಗಿ ತಿಳಿದುಕೊಳ್ಳಬೇಕು. ಈ ನಾಟಕದ ಮಾತುಗಳಲ್ಲಿ ಕೆಲವರು ಗೊಂದಲವಾಗುತ್ತಾರೆ ಆದುದರಿಂದ ಮೊದಲು ಅವರಿಗೆ ಮನದಟ್ಟಾಗುವಂತೆ ತಂದೆಯಿಂದ ಆಸ್ತಿ ಸಿಗುತ್ತದೆ ಎನ್ನುವದನ್ನು ತಿಳಿಸಿಕೊಡಬೇಕು. ಕಲ್ಪ-ಕಲ್ಪ ತಂದೆಯಿಂದ ಭಾರತಕ್ಕೆ ಮಾತ್ರ ಆಸ್ತಿ ಸಿಗುತ್ತದೆ. 84 ಜನ್ಮಗಳನ್ನು ಸಹ ತೆಗೆದುಕೊಳ್ಳಬೇಕು. ವರ್ಣಗಳನ್ನು ಕುರಿತು ತಿಳಿಸಿಕೊಡಬೇಕು. ನಾವು ಬೇಹದ್ದಿನ ತಂದೆಯಿಂದ ಬೇಹದ್ದಿನ ಆಸ್ತಿಯನ್ನು ತೆಗೆದುಕೊಳ್ಳುತ್ತಿದ್ದೇವೆಂದು ಒಬ್ಬರಿಗೊಬ್ಬರು ನೆನಪು ಮಾಡಿಸಬೇಕು. ಎಲ್ಲರೂ ಬಂದು ಓದುವುದಿಲ್ಲ. ನೀವು ಸೇವಾಕೇಂದ್ರಗಳನ್ನು ತೆರೆಯುತ್ತಾ ಹೋದಂತೆ ನರಕವಾಸಿಗಳು ಬಂದು ಸ್ವರ್ಗವಾಸಿಗಳು ಆಗುವುದನ್ನು ನೋಡುತ್ತೀರಿ. ಕೆಲವರು ನಾವು ಸೇವಾಕೇಂದ್ರ ತೆರೆಯಲು ಪ್ರಬಂಧ ಮಾಡುತ್ತೇವೆ ಹಾಗೂ ನಮಗೆ ಯಾವ ವಸ್ತುವಿನಲ್ಲಿ ಮೋಹವಿಲ್ಲವೆಂದು ತಂದೆಗೆ ಪತ್ರ ಬರೆಯುತ್ತಾರೆ. ಇದೆಲ್ಲವೂ ಈಶ್ವರನಿಗಾಗಿದ್ದು, ಈಗ ತಾವು ನೀಡುವ ಸಲಹೆಯಂತೆ ಮಾಡುತ್ತೇವೆಂದು ಕೇಳುತ್ತಾರೆ. ಆಗ ತಂದೆಯೂ ಸಹ ಈ ರೀತಿ ಬರೆಯುತ್ತೇನೆ - ನೀವು ಪರಸ್ಪರ ಸಲಹೆ ತೆಗೆದುಕೊಳ್ಳುತ್ತಾ ಒಳ್ಳೆಯ ಸ್ಥಾನದಲ್ಲಿ ಸೇವಾಕೇಂದ್ರವನ್ನು ತೆರೆಯುವಂತೆ ಹೇಳುತ್ತೇನೆ. ಮಕ್ಕಳ ಧೈರ್ಯಕ್ಕೆ ತಂದೆಯ ಸಹಯೋಗವಿದೆ. ತಂದೆಯೂ ಸಹ ಎಷ್ಟೊಂದು ಖುಷಿಯಾಗುತ್ತಾರೆ. ಇಂತಹ ದಾನ ಉತ್ತಮವಾದ ದಾನ, ಅನೇಕರನ್ನು ಕವಡೆಯಿಂದ ವಜ್ರ ಸಮಾನ ಮಾಡುವಂತಹ ದಾನವೆಂದು ಮನಸ್ಸಿನಲ್ಲಿ ತಿಳಿದುಕೊಳ್ಳುತ್ತೇವೆ. ಇದು ಎಲ್ಲಕ್ಕಿಂತಲೂ ಉನ್ನತವಾದ ಆಸ್ಪತ್ರೆ ಹಾಗೂ ಕಾಲೇಜ್ ಇದಾಗಿದೆ. ಕೇವಲ ಮೂರು ಹೆಜ್ಜೆ ಭೂಮಿ ಇದ್ದರೆ ಸಾಕು, ಹೀಗೆ ತಂದೆಯು ಎಷ್ಟು ಸಹಜವಾಗಿ ಕವಡೆಯಿಂದ ವಜ್ರ ಸಮಾನ ಮಾಡುತ್ತಾರೆ ಆದರೆ ಈ ತಂದೆ ಎಷ್ಟು ಸರಳವಾಗಿ ಇರುವರೆಂದು ನೋಡಿ, ಯಾವುದೇ ರಾಜನಲ್ಲಿ ಪ್ರವೇಶವಾಗದೆ ಎಂತಹ ಸಾಧಾರಣ ರೂಪದಲ್ಲಿ ಬಂದಿದ್ದಾರೆ? ನಾನು 84 ಜನ್ಮಗಳನ್ನು ಪೂರ್ಣ ಮಾಡಿರುವಂತಹ ಸಾಧಾರಣ ವೃದ್ಧ ಮಾನವನ ಶರೀರದಲ್ಲಿ ಪ್ರವೇಶ ಮಾಡುತ್ತೇನೆಂದು ತಂದೆ ಹೇಳುತ್ತಾರೆ. ಸತ್ಯಯುಗ ಮೊದಲನೇ ರಾಜಕುಮಾರ ಇವರೇ ಆಗಿದ್ದರಲ್ಲವೇ. ಇವರಿಗೆ ಶ್ಯಾಮ-ಸುಂದರನೆಂಬ ಹೆಸರೂ ಸಹ ಇದೆ. ಇದರ ಅರ್ಥವನ್ನು ನೀವು ಮಕ್ಕಳು ತಿಳಿದುಕೊಂಡಿದ್ದೀರಿ, ಅವರು ಅರ್ಥವನ್ನು ತಿಳಿದುಕೊಳ್ಳದ ಕಾರಣ ಕೃಷ್ಣನನ್ನು ಕಪ್ಪಾಗಿ ಮಾಡಿದ್ದಾರೆ. ಮುಖ್ಯವಾಗಿ ಶಿವ ತಂದೆಯ ಲಿಂಗವೂ ಸಹ ಕಪ್ಪಾಗಿದೆ, ಕೃಷ್ಣ ರಾಮನನ್ನು ಕಪ್ಪಾಗಿ ಮಾಡಿದ್ದಾರೆ. ಒಂದು ಕಡೆ

ಶ್ಯಾಮ ಮತ್ತೊಂದು ಕಡೆ ಸುಂದರವಾಗಿ ಏಕೆ ತೋರಿಸುತ್ತಾರೆ? ಜಗನ್ನಾಥ ಮಂದಿರದಲ್ಲಿ ಮೂರ್ತಿಯ ಮುಖವನ್ನು ಆಫ್ರಿಕಾ ದೇಶದ ಮನುಷ್ಯರಂತೆ ಕಪ್ಪಾಗಿ ತೋರಿಸುತ್ತಾರೆ. ಕೆಲವೊಮ್ಮೆ ನಾರಾಯಣನನ್ನೂ ಸಹ ಕಪ್ಪಾಗಿ ಮಾಡಿದ್ದಾರೆ ಹಾಗೂ ಕೆಲವು ಕಡೆ ಲಕ್ಷ್ಮಿಯನ್ನು ಅದೇರೀತಿ ತೋರಿಸುತ್ತಾರೆ. ಇದರಿಂದ ಮನುಷ್ಯರ ಬುದ್ಧಿ ಹೇಗಿದೆ ಎಂದು ಆಶ್ಚರ್ಯವಾಗುತ್ತದೆ. ತನ್ನ ಜೊತೆ ಮಿಲನ ಮಾಡುವ ಸತ್ಯ ಮತವನ್ನು ತಂದೆಯು ಮಾತ್ರ ನೀಡುತ್ತಾರೆ. ಉಳಿದೆಲ್ಲರೂ ಯಜ್ಞ, ತಪ, ದಾನ, ಪುಣ್ಯ ಮೊದಲಾದವುಗಳನ್ನು ಮಾಡುತ್ತಾ ವ್ಯರ್ಥವಾಗಿ ತಮ್ಮ ಹಣವನ್ನು ಕಳೆದುಕೊಳ್ಳುತ್ತಾರೆ. ಇದೆಲ್ಲವನ್ನು ಮಾಡುತ್ತಾ ಪತಿತ ಪಾವನ ಬಾ ಎಂದು ಏಕೆ ಹೇಳುತ್ತಾರೆ. ಹೀಗೆ ಏಕೆ ನೆನಪು ಮಾಡುತ್ತಾರೆ? ಗಂಗಾ, ಯಮುನಾ, ಕೊಳಗಳು ಮೊದಲಾದವುಗಳು ಬಹಳಷ್ಟು ಇವೆ. ಈ ತಂದೆಯೂ (ಬ್ರಹ್ಮಾ) ಬಹಳ ತೀರ್ಥ ಯಾತ್ರೆ ಮುಂತಾದವುಗಳನ್ನು ಮಾಡಿದ್ದಾರೆ. ಈಗ ನೀವು ಅತಿಪ್ರಿಯ ಅದೃಷ್ಟ ನಕ್ಷತ್ರಗಳು ನರಕ ಹಾಗೂ ಸ್ವರ್ಗವನ್ನು ತಿಳಿದುಕೊಂಡಿದ್ದೀರಿ. ಮನುಷ್ಯರು ಸತ್ತಾಗ ಸ್ವರ್ಗಕ್ಕೆ ಹೋದರೆಂದು ಹೇಳುವರು. ಅವರಿಗೆ ಯಾವುದಕ್ಕೆ ಸ್ವರ್ಗ ಎಂದು ಹೇಳುತ್ತಾರೆ ಎನ್ನುವುದನ್ನು ತಿಳಿಸಬೇಕು. ನಾವು ತಿಳಿದುಕೊಂಡಿರುವ ಕಾರಣ ಅವರಿಗೆ ತಿಳಿಸುತ್ತೇವೆ ಏಕೆಂದರೆ ನಮಗೆ ಸ್ವರ್ಗ ಸ್ಥಾಪನೆ ಮಾಡುವಂತಹ ತಂದೆ ಜ್ಞಾನವನ್ನು ನೀಡುತ್ತಿದ್ದಾರೆ. ಇಲ್ಲಿ ನಮಗೆ ಯಾವ ಮನುಷ್ಯರು ಗುರುಗಳಲ್ಲ. ಸದ್ಗುರು ತಂದೆ ಒಬ್ಬರೇ ಆಗಿದ್ದಾರೆ, ಅವರೇ ಪತಿತ-ಪಾವನರಾದ್ದರಿಂದ ಎಲ್ಲರೂ ಅವರನ್ನು ಕರೆಯುತ್ತಾರೆ. ನಿರಾಕಾರನನ್ನೇ ಕರೆಯುತ್ತಾರಲ್ಲವೇ, ನೀವು ಅವರನ್ನು ಜ್ಞಾನ ಸಾಗರನೆಂದು ಹೇಳುತ್ತೀರಿ. ಅವರು ಸತ್ಚಿತ್ ಆನಂದ ಸ್ವರೂಪ, ಜ್ಞಾನ ಸಾಗರ ಆಗಿದ್ದಾರೆ. ನಮ್ಮಲ್ಲಿ ಈ ಜ್ಞಾನ ಇರಲು ಸಾಧ್ಯವಿಲ್ಲ. ಅವರ ಬಳಿ ಇರುವ ಜ್ಞಾನ ಬೇರೆ ಯಾರ ಬಳಿ ಇಲ್ಲವೆಂಬುದನ್ನು ನೋಡಬಹುದು. ನಿಮಗಂತೂ ಅಶ್ಚರ್ಯವಾಗಬೇಕು ಏಕೆಂದರೆ ಪತಿತ ಪಾವನ ಪರಮಪಿತ ಪರಮಾತ್ಮ ನಮಗೆ ಓದಿಸುತ್ತಾರೆ. ಅವರೇ ನಮ್ಮ ತಂದೆ-ಶಿಕ್ಷಕ-ಸದ್ಗುರು ಆಗಿರುವರು, ಹೀಗೆ ಈ ಮಾತಿನಲ್ಲಿ ನೀವು ಮೋಸ ಹೋಗುವ ಆವಶ್ಯಕತೆಯಿಲ್ಲ. ತಮ್ಮ ರಚನೆಯನ್ನು ನೋಡಿಕೊಳ್ಳಬೇಕಾಗುತ್ತದೆ. ಒಂದುವೇಳೆ ಇಲ್ಲಿಯೇ ಬಂದು ಕುಳಿತು ಬಿಟ್ಟರೆ ಇದು ಸನ್ಯಾಸಿಗಳ ಜ್ಞಾನವಾಗುತ್ತದೆ. ಗೃಹಸ್ಥ ವ್ಯವಹಾರದಲ್ಲಿರುತ್ತಾ ನೀವು ಒಂದು ಗಂಟೆ, ಅರ್ಧ ಗಂಟೆಯಷ್ಟು ಸಮಯವನ್ನು ಬಿಡುವು ಮಾಡಿಕೊಳ್ಳಬೇಕು. ಮೊದಲು ಏಳುದಿನಗಳ ಭಟ್ಟಿಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. 7 ದಿನಗಳವರೆಗೆ ಯಾರ ನೆನಪು ಬಾರದಂತೆ, ಯಾರಿಗೂ ಪತ್ರವನ್ನು ಬರೆಯಬಾರದು. ಸಂಪೂರ್ಣವಾಗಿ ಎಲ್ಲವನ್ನು ಮರೆಯಬೇಕು. ನೀವು ಬಹಳ ವರ್ಷಗಳ ಕಾಲ ಭಟ್ಟಿಯಲ್ಲಿ ಇರಬೇಕಾಯಿತು ಆದರೆ ಕೆಲವರ ಅದೃಷ್ಟ ಮಾಯೆಯೂ ತನ್ನ ಕಡೆ ಸೆಳೆದುಕೊಳ್ಳುವಷ್ಟು ಪ್ರಬಲವಾಗಿದೆ.

ತಂದೆ ಹೇಳುತ್ತಾರೆ - ಮಕ್ಕಳೇ ನಿಧಾನ-ನಿಧಾನವಾಗಿ ಪರಿಪಕ್ವ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾ ಹೋಗಬೇಕು. ನಮ್ಮ 84 ಜನ್ಮ ಪೂರ್ಣವಾಯಿತೆಂದು ನೀವು ತಿಳಿದುಕೊಂಡಿದ್ದೀರಿ. ನಿಮ್ಮ ಬುದ್ಧಿಯಲ್ಲೀಗ ವೃಕ್ಷ ಹಾಗೂ ಎಲ್ಲಾ ಧರ್ಮದ ಜ್ಞಾನವಿದೆ. ಪರಮಧಾಮದಲ್ಲಿಯೂ ಸಹ ಪಾತ್ರಕ್ಕೆ ಅನುಗುಣವಾಗಿ ಬೇರೆ ಬೇರೆ ವಿಭಾಗಗಳಿವೆ. ಇಲ್ಲಿಯೂ ಸಹ ಅದೇರೀತಿ ಇದ್ದು ಪರಮಧಾಮದಲ್ಲಿ ಹಾಗೆಯೇ ಇರುತ್ತದೆ. ಹೀಗೆ ಯಾರಿಗೂ ಮೋಕ್ಷ ಸಿಗುವುದಿಲ್ಲ. ಕೆಲವರು ಆತ್ಮನನ್ನು ನೀರಿನ ಗುಳ್ಳೆ ಸೇರುವಂತೆ ಆತ್ಮ ಪರಮಾತ್ಮನಲ್ಲಿ ಸೇರುತ್ತದೆ ಎಂದು ಹೇಳುವುದು ತಪ್ಪಾಗಿದೆ. ಒಂದುವೇಳೆ ಹೀಗೆ ಆತ್ಮ ಪರಮಾತ್ಮನಲ್ಲಿ ಸಮಾವೇಶವಾಗುವುದಾದರೆ ಆತ್ಮದ ಪಾತ್ರವು ಸಮಾಪ್ತಿ ಆಗುತ್ತದೆ. ಎಲ್ಲಾ ಜ್ಯೋತಿಗಳು ಜ್ಯೋತಿಯಲ್ಲಿ ಸಮಾವೇಶವಾದರೆ ಈ ಆಟವು ನಡೆಯಲು ಸಾಧ್ಯವಿಲ್ಲ ಆದುದರಿಂದ ಈ ಎಲ್ಲಾ ಮಾತುಗಳು ಸುಳ್ಳಾಗಿವೆ. ಸುಳ್ಳಂತು ಸಂಪೂರ್ಣವಾಗಿ ಸುಳ್ಳಾಗಿದ್ದು, ಸ್ವಲ್ಪವೂ ಸಹ ಸತ್ಯಾಂಶವಿಲ್ಲ. ಈ ರೀತಿ ಭಕ್ತಿಮಾರ್ಗದ ಜೀವನದಲ್ಲಿ ಖುಷಿ ಆಗುವುದಿಲ್ಲ. ಖುಷಿ ಪಡಿಸುವವರು ಯಾರು ಎನ್ನುವುದನ್ನು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಆದುದರಿಂದ ತಂದೆಯ ವಿದ್ಯೆಯ ಮೇಲೆ ಪೂರ್ತಿ ಗಮನ ಕೊಡಬೇಕು. ಹಳೆಯ ಪ್ರಪಂಚವನ್ನು ನೋಡಿ ಮೋಹಿತರಾಗಬಾರದು ಹಾಗೂ ದೇಹಾಭಿಮಾನದಲ್ಲಿ ಬರಬಾರದು. ಈಗಂತೂ ತಮ್ಮದೆಲ್ಲವನ್ನು ತಯಾರು ಮಾಡಿಕೊಂಡು ಹೊಸ ಪ್ರಪಂಚಕ್ಕೆ ವರ್ಗಾವಣೆ (ಟ್ರಾನ್ಸ್ಫರ್) ಮಾಡಿಕೊಳ್ಳಿ ಏಕೆಂದರೆ ಈ ಪ್ರಪಂಚವು ಸಮಾಪ್ತಿಯಾಗುವುದಾಗಿದೆ. ತಮ್ಮದೆಲ್ಲವನ್ನು ಇನ್ಶ್ಯೂರ್ ಮಾಡಿಕೊಳ್ಳಿ ಎಂದು ತಂದೆ ಹೇಳುತ್ತಾರೆ. ಭಕ್ತಿಮಾರ್ಗದಲ್ಲಿ ಮಾಡುವುದು ಅಲ್ಪಕಾಲದ ಫಲ ಪ್ರಾಪ್ತಿಯಾಗುತ್ತದೆ. ಭಕ್ತಿಯಲ್ಲೂ ಸಹ ಈಶ್ವರನು ಕೊಟ್ಟರೆಂದು ತಿಳಿಯುತ್ತಾರೆ. ಈಗ ನೀವು ತಂದೆಗೆ ಕೊಡುವದರಿಂದ ನಿಮಗೆ ತಂದೆಯೇ ಹಿಂತಿರುಗಿ ಕೊಡುತ್ತಾರೆ. ಆದರೆ ಇಲ್ಲಿ ನೀವು ಸೀದಾ ತಂದೆಗೆ ಕೊಡುವ ಕಾರಣ ನಿಮಗೆ 21 ಜನ್ಮಗಳಿಗೆ ಇನ್ಶ್ಯೂರೆನ್ಸ್ ಸಿಗುತ್ತದೆ. ನಾವು ಎಲ್ಲವನ್ನು ಇನ್ಶ್ಯೂರ್ ಮಾಡಿದಾಗ ಸಂಪೂರ್ಣ ರಾಜ್ಯಭಾಗ್ಯ ಸಿಗುತ್ತದೆ ಎಂದು ತಂದೆ ಹೇಳುತ್ತಾರೆ, ಅದು ಭೌತಿಕವಾದ ಇನ್ಶ್ಯೂರೆನ್ಸ್ ಆಗಿದೆ. ಇದು ಆತ್ಮಗಳ ತಂದೆಯ ಜೊತೆ ಮಾಡಿಕೊಳ್ಳುವ ಇನ್ಶ್ಯೂರೆನ್ಸ್ ಆಗಿದೆ. ಈಶ್ವರಾರ್ಥವಾಗಿ ದಾನ ಮಾಡುತ್ತಾರಲ್ಲವೇ! ಆಗ ಈಶ್ವರದ ದಾನದ ಪ್ರತಿಯಾಗಿ ಫಲವನ್ನು ಕೊಡುತ್ತಾರೆ. ಅವರು ಭಕ್ತಿ ಮಾರ್ಗದಲ್ಲಿಯೂ ದಾತನಾಗಿದ್ದು ಜ್ಞಾನಮಾರ್ಗದಲ್ಲಿಯೂ ದಾತನಾಗಿದ್ದಾರೆ. ಇದು ಬೇಹದ್ದಿನ ರಾಜ್ಯಭಾಗ್ಯದ ಸಲುವಾಗಿ ಬೇಹದ್ದಿನ ವಿದ್ಯೆಯಾಗಿದೆ. ನೀವೀಗ ಎಷ್ಟು ಬೇಕು, ಅಷ್ಟು ತೆಗೆದುಕೊಳ್ಳಿ. ವಿಶ್ವದ ರಾಜ್ಯಭಾಗ್ಯವನ್ನೇ ತೆಗೆದುಕೊಳ್ಳಬಹುದು. ಪುರುಷಾರ್ಥದಂತೆ ವಿಜಯೀಗಳಾಗುತ್ತೀರಿ. ವಿಜಯ ಮಾಲೆಯಲ್ಲಿ ಮಣಿಯಾಗಲು ಪ್ರಯತ್ನ ಮಾಡಿ. ಗೊಂದಲವಾದರೆ, ರಹಸ್ಯವನ್ನು ತಿಳಿಸುವಂತಹ ತಂದೆ ಕುಳಿತಿದ್ದಾರೆ. ನಾವು ಅನೇಕ ಬಾರಿ ರಾಜ್ಯಭಾಗ್ಯವನ್ನು ತೆಗೆದುಕೊಂಡು ಕಳೆದುಕೊಂಡಿದ್ದೇವೆಂದು ನೀವು ತಿಳಿದುಕೊಂಡಿದ್ದೀರಿ. ಈ ಜ್ಞಾನವೂ ಸಹ ಈಗ ಮಾತ್ರ ಇದೆ, ಪುನಃ ಸತ್ಯಯುಗದಲ್ಲಿ ಮರೆತು ಹೋಗುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಹಳೆಯ ಪ್ರಪಂಚವನ್ನು ನೋಡಿ ಮೋಹಿತರಾಗಬಾರದು, ತಮ್ಮ ಎಲ್ಲವನ್ನು ಟ್ರಾನ್ಸ್ಫರ್ ಮಾಡಿಕೊಳ್ಳಬೇಕು ಹಾಗೂ ಇನ್ಶ್ಯೂರ್ ಮಾಡಿಕೊಳ್ಳಬೇಕು.

2. ಒಂದುವೇಳೆ ಯಾವುದೇ ವಸ್ತುವಿನೊಂದಿಗೆ ಮೋಹ ಇಲ್ಲವೆಂದರೆ ಕವಡೆಯಿಂದ ವಜ್ರ ಸಮಾನ ಆಗುವ ಸೇವೆಯನ್ನು ಮಾಡಬೇಕು. ದಾನ ಮಾಡುವುದರಿಂದ ಜ್ಞಾನಧನ ವೃದ್ಧಿ ಆಗುತ್ತದೆ.

ವರದಾನ: ನಿಮಿತ್ತನೆಂಬ ಸ್ಮೃತಿಯಿಂದ ಪ್ರತಿಯೊಂದು ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ಎವರೆಡಿ, ನಷ್ಟಮೋಹ ಭವ.

ಎವರೆಡಿ ಎಂದರೆ ನಷ್ಟಮೋಹ ಸ್ಮೃತಿ ಸ್ವರೂಪರಾಗುವುದು. ಯಾವುದೇ ಸಂಬಂಧಿ ಅಥವಾ ವಸ್ತುವೂ ನೆನಪಿಗೆ ಬರಬಾರದು, ಯಾವುದರಲ್ಲಿಯೂ ಸೆಳೆತವಿರಬಾರದು, ಎಲ್ಲದರಿಂದ ಭಿನ್ನ ಹಾಗೂ ಎಲ್ಲರಿಗೂ ಪ್ರಿಯರಾಗಿರಬೇಕು. ಇದಕ್ಕಾಗಿ ನಿಮಿತ್ತ ಭಾವದಲ್ಲಿರುವುದೇ ಸಹಜ ಪುರುಷಾರ್ಥವಾಗಿದೆ. ನಿಮಿತ್ತನೆಂದು ತಿಳಿಯುವುದರಿಂದ ``ನಿಮಿತ್ತನನ್ನಾಗಿ ಮಾಡುವವರ'' ನೆನಪು ಬರುತ್ತದೆ. ನನ್ನ ಪರಿವಾರ, ನನ್ನ ಕೆಲಸ ಎನ್ನುವುದಲ್ಲ, ನಾನು ನಿಮಿತ್ತನಿದ್ದೇನೆ. ನಿಮಿತ್ತನೆಂಬ ಈ ಸ್ಮೃತಿಯಿಂದ ಪ್ರತಿಯೊಂದು ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಬಿಡುತ್ತೀರಿ.

ಸ್ಲೋಗನ್: ಬ್ರಹ್ಮಾ ತಂದೆಯ ಸಂಸ್ಕಾರವನ್ನು ತಮ್ಮ ಸಂಸ್ಕಾರವನ್ನಾಗಿ ಮಾಡಿಕೊಳ್ಳುವುದೇ ಫಾಲೋ ಫಾದರ್(ತಂದೆಯನ್ನು ಅನುಕರಣೆ ಮಾಡುವುದು) ಮಾಡುವುದಾಗಿದೆ.